'ಮುಂಜಾವು' ಚಂದಾ ದರ
ಆಜೀವ ಚಂದಾ ೨೦೦ ರೂ
ವಾರ್ಷಿಕ ಚಂದಾ ೨೦ ರೂ.
ಬಿಡಿ ಪ್ರತಿ ೫೦ ಪೈಸೆ
ಜಾಹೀರಾತು ದರ
(ಕಾಲಂ ಸೆಂ. ಮೀ.ಗೆ)
ಮುಖಪುಟದಲ್ಲಿ: ೬ ರೂ.
ಇತರ ಪುಟಗಳಲ್ಲಿ: ೪ ರೂ.

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ ಸಂಚಿಕೆ ೩೯ ಭಾನುವಾರ ೨೨-೫-೧೯೮೩ ಕೊಪ್ಪ ಬೆಲೆ ೫೦ ಪೈಸೆ

ಕೊಪ್ಪದ ನಾಗರಿಕರಿಗೆ ಪುರಸಭೆಯ 'ಶಾಕ್'!

ಕೊಪ್ಪ: ಮೇ ೧೮ರ ಬೆಳಿಗ್ಗೆ ಇಲ್ಲಿನ ಪುರಸಭೆ ನಾಗರಿಕರಿಗೆ ಒಂದು 'ಶಾಕ್' ಕೊಟ್ಟಿದೆ.

"ವಿದ್ಯುಚ್ಛಕ್ತಿ ಪದೇ ಪದೇ ನಿಲುಗಡೆಯಾಗುತ್ತಿರುವುದರಿಂದ ನೀರು ಸರಬರಾಜಿಗೆ ತೊಂದರೆಯಾಗಿದೆ. ವಿದ್ಯುಚ್ಛಕ್ತಿ ಪೂರೈಕೆ ಸರಿಯಿದ್ದಾಗ ಮಾತ್ರ ನೀರು ಸರಬರಾಜು ಮಾಡಲಾಗುವುದು. ಪುರಸಭೆಯೊಂದಿಗೆ ಸಹಕರಿಸಿ" ಎಂದು ಪ್ರಚಾರ ಮಾಡುತ್ತಾ ಆಟೋ ರಿಕ್ಷಾವೊಂದು ಅಂದು ಬೆಳಿಗ್ಗೆ ಪೇಟೆಯ ಮೂಲೆ ಮೂಲೆಗಳಲ್ಲಿ ಸಂಚರಿಸಿತು.

ಕೆಸರು ನೀರಾದರೂ ಸಹ (ಹರಿಹರಪುರ ಹೊಳೆಯ ನೀರು ಎತ್ತಿದ್ದರೆ ಮಾತ್ರ ಸ್ವಲ್ಪ ಹೊತ್ತು ಸ್ವಚ್ಛ ನೀರು ಬರುವುದು) ಫೆಬ್ರವರಿಯಲ್ಲಿ ನಲ್ಲ ನೀರು ಬಳಕೆದಾರರ ಸಭೆ ನಡೆದ ನಂತರ ನೀರು ಪೂರೈಕೆ ಸ್ವಲ್ಪ ಮಟ್ಟಿಗೆ ಸುಧಾರಿಸಿತ್ತು. ಆದರೆ ಈ ಪ್ರಕಟಣೆ ಜನರಿಗೆ ದಂಗು ಬಡಿಸಿತು.

ಹಿರೀಕೆರೆ ಖಾಲಿ

ಈಗಾಗಲೇ ಖಾಲಿಯಾಗಿರುವ ಹಿರೀಕೆರೆಯಿಂದ ಸಂಗ್ರಹಿಸಿ ಬಿಡುವ ನೀರು ಯಾತಕ್ಕೂ ಪ್ರಯೋಜನವಿಲ್ಲದ್ದು. ಹರಿಹರಪುರದಿಂದ ಹಗಲೂ ರಾತ್ರಿ ಎತ್ತುವ ನೀರು ೨-೩ ಗಂಟೆ ಪೂರೈಕೆಯಾಗುತ್ತಿತ್ತು. ಆದರೆ ಈಗ್ಗೆ ೧೦-೧೨ ದಿನದಿಂದ ವಿದ್ಯುಚ್ಛಕ್ತಿ ಪದೇ ಪದೇ ಕಡಿದುಹೋಗುತ್ತಿದ್ದು ನೀರೆತ್ತುವುದು ಸಾಧ್ಯವೇ ಇಲ್ಲವಾಗಿದೆ. ಇಲಾಖೆಯನ್ನು ಕೇಳಿದರೆ, 'ವಿದ್ಯುತ್ ಲೈನಿನಲ್ಲಿ ದೋಷ (ಫಾಲ್ಟ್) ಎದುರಾಗುತ್ತಿದೆ' ಎನ್ನುತ್ತಾರೆ ಎಂಬುದು ಪುರಸಭೆಯ ವಿವರಣೆ.

ಆಶಾವಾದ

ವಿದ್ಯುತ್ ಇಲಾಖೆಯಂತೂ ಜನರನ್ನು ಯಾವತ್ತೋ ಬೀದಿಗೆ ಹಾಕಿದೆ. ಪುರಸಭಾಧ್ಯಕ್ಷರ ಪ್ರಕಾರ ಇದ್ದುದರಲ್ಲೇ ಸ್ವಲ್ಪ ಆಶಾವಾದಕ್ಕೆ ಇರುವ ಅವಕಾಶವೆಂದರೆ ಪುರಸಭೆ ನೀರು ಪೂರೈಕೆಯಲ್ಲಿ ಕೆಲವು ಸುಧಾರಣೆಗಳನ್ನು ಮಾಡುತ್ತಿರುವುದು.

ಎರಡನೇ ಪಂಪ್ ಹೌಸಿನಲ್ಲಿ ಕೆಟ್ಟುನಿಂತಿದ್ದ ಒಂದು ಮೋಟರು, ಇಂಕ್‌ಫಿಲ್ಟರ್ ಎಂಬ ಒಂದು ಪ್ರಮುಖ ಉಪಕರಣ ಮತ್ತು ಕೆಲವು ಬಿಡಿ ಭಾಗಗಳನ್ನು ರಿಪೇರಿಗೆ ಕಳಿಸಲಾಗಿದೆ. ಕೆಲವು ಬಿಡಿಭಾಗಗಳನ್ನು ಹೊಸದಾಗಿ ತರಿಸಲಾಗಿದೆ. ಇವನ್ನೆಲ್ಲ ಅಳವಡಿಸಿದರೆ ಹಗಲು ಮತ್ತು ರಾತ್ರಿ ಒಟ್ಟಿಗೆ ಸುಮಾರು ೧ ಲಕ್ಷ ಗ್ಯಾಲನ್ ನೀರು ಎತ್ತಲು ಸಾಧ್ಯ. ಸದ್ಯಕ್ಕೆ ಇಷ್ಟರಿಂದ ನಿಭಾಯಿಸಬಹುದು. ಅಲ್ಲದೆ, ಸಿಂಡಿಕೇಟ್ ಬ್ಯಾಂಕ್ ಬಳಿ ಹಾಗೂ ನೀರಿನ ಟ್ಯಾಂಕ್ ಬಳಿ ಒಂದೊಂದು ನಿಯಂತ್ರಣ ವಾಲ್ವ್‌ಗಳನ್ನು ಸದ್ಯವೇ ಅಳವಡಿಸಲಾಗುತ್ತದೆ. ಇದೆಲ್ಲ ಇನ್ನು ಹದಿನೈದಿಪ್ಪತ್ತು ದಿನದಲ್ಲಿ ಮುಗಿಯುವ ನಿರೀಕ್ಷೆಯಿದೆ.

ಇಷ್ಟೆಲ್ಲ ಆದರೂ ಪುನಃ ವಿದ್ಯುಚ್ಛಕ್ತಿಯನ್ನೇ ಹೊಂದಿಕೊಂಡಿದೆಯಾದ್ದರಿಂದ ಲೈನಿನ ದೋಷಗಳ ಬಗ್ಗೆ ಆದಷ್ಟೂ ಮುತುವರ್ಜಿವಹಿಸಲು ಇಲಾಖೆಯನ್ನೂ ವಿನಂತಿಸಲಾಗಿದೆ.

ಉಚಿತ ಬೀಜದ ಭತ್ತ ದುರುಪಯೋಗದ ಆರೋಪ

ಕೊಪ್ಪ: ಇಲ್ಲಿನ ತಾ.ಅ.ಮಂಡಳಿಯ ಮೂಲಕ ಬಡವರಿಗೆ ಉಚಿತವಾಗಿ ಹಂಚುವ ಸಲುವಾಗಿ ಸರ್ಕಾರದಿಂದ ಬಂದಿದ್ದ ೧೦ ಕ್ವಿಂಟಾಲ್ ಉತ್ತಮ ಬೀಜದ ಭತ್ತವನ್ನು ತಾ.ಅ.ಮಂ. ಸದಸ್ಯರಾದ ಜಿ. ಎಸ್. ಶ್ರೀನಿವಾಸ್ ಮತ್ತು ರಾಮಾನಾಯ್ಕ ಅವರಿಗೂ ಹಾಗೂ ಗುಣವಂತೆಯಲ್ಲಿ ೨ ಎಕ್ರೆ ಬಾಗಾಯ್ತು ಮತ್ತು ಇತರ ಜಮೀನು ಇರುವ ಇಬ್ಬರಿಗೂ ತಲಾ ೫೦ ಕಿಲೊ ಹಂಚಿದ್ದು, ಉಳಿದ ಭತ್ತ ಕೂಡ ಇದೇ ರೀತಿ ದುರುಪಯೋಗ ಆಗಿರಬಹುದೆಂದು ತಾ|| ರೈತ ಸಮಿತಿ ಸದಸ್ಯ ಸತೀಶ್ ಶಾಸಕರಿಗೆ ದೂರಿತ್ತಿದ್ದಾರೆ.

ವಾರ್ಷಿಕೋತ್ಸವಗಳು

ಕಲ್ಲುಗುಡ್ಡೆ

ಇಲ್ಲಿನ ವಿವೇಕಾನಂದ ಯುವಕ ಕೃಷಿ ಸಂಘ ಮತ್ತು ಚೈತನ್ಯ ಮಹಿಳಾ ಸಮಾಜಗಳ ವಾರ್ಷಿಕೋತ್ಸವ ಮೇ. ೫ರಂದು ಬಿ. ಎನ್. ವಾಸುದೇವಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಹೆಚ್. ಎನ್. ಶ್ರೀಕಂಠಪ್ಪ, ಬಿ. ಲಕ್ಷ್ಮೀನಾರಾಯಣಪ್ಪ ಮುಖ್ಯ ಅತಿಥಿಗಳಾಗಿದ್ದರು. ಕೆ. ಟಿ. ದೋರಯ್ಯ ಅಂಗನವಾಡಿಯ ಉದ್ಘಾಟನೆ ನೆರವೇರಿಸಿದರು. ಬಿ.ವಿ. ಶ್ರೀಧರರಾವ್ ಸ್ವಾಗತಿಸಿ, ಜಯಂತಿ ಪಿ.ಭಟ್ ವಂದಿಸಿದರು. ಮನರಂಜನಾ ಕಾರ್ಯಕ್ರಮಗಳು ನಡೆದವು.

ಕುದ್ರೆಗುಂಡಿ

ಮೇ ೧೧ ರಂದು ಯುವಕ ಸಂಘದ ವಾರ್ಷಿಕೋತ್ಸವ ಪಿ.ಜಿ. ಗುರ್ಜಾರ್ ಅಧ್ಯಕ್ಷತೆಯಲ್ಲಿ ನಡೆಯಿತು. ಲಯನ್ ಡಾ|| ಎಸ್. ಎಂ. ಶಾನಭಾಗ್, ಬಿ. ಕೆ. ಜಯರಾಜ್, ನಿಸಗ ಶ್ರೀನಿವಾಸ್, ಕೆ. ವಿಜಯ ಕಮಲ ಮುಖ್ಯ ಅತಿಥಿಗಳಾಗಿದ್ದರು. ಸಂಘದ ಪರವಾಗಿ ಕೃಷ್ಣ ಕುಮಾರ್ ಭಾಷಣ ಮಾಡಿದರು. ರಾಧಾಕೃಷ್ಣ ಸ್ವಾಗತಿಸಿ, ಹೆಚ್. ಪಿ. ಚಕ್ರಪಾಣಿ ವಂದಿಸಿದರು.

ಇದೇ ಸಂದರ್ಭದಲ್ಲಿ ಮಹಿಳಾ ಸಮಾಜದ ಆಶ್ರಯದಲ್ಲಿ ಅಂಗನವಾಡಿಯ ಉದ್ಘಾಟನೆಯನ್ನು ಪಿ. ಜಿ.ಗುರ್ಜಾರ್ ನೆರವೇರಿಸಿದರು.

ಕಿಗ್ಗ ಹೋಬಳಿಯಲ್ಲಿ ಶಾಸಕರ ಪಾದಯಾತ್ರೆ: ಬೇಗಾರು-ನೆಮ್ಮಾರು ರಸ್ತೆಗೆ ಪ್ರಾಶಸ್ತ್ಯಕ್ಕೆ ಸೂಚನೆ

(ವರದಿ: ಮಾ. ಶೀ. ಗಣಪತಿ)

ಶೃಂಗೇರಿ: ಆಗುಂಬೆ-ಕೆರೆಕಟ್ಟೆ ಬೆಟ್ಟದ ಸಾಲಿನ ತಪ್ಪಲಲ್ಲಿರುವ ಅಸಂಖ್ಯ ಸಣ್ಣ-ಪುಟ್ಟ ಹಳ್ಳಿಗಳಿಗೆ ತುಂಬ ಉಪಯುಕ್ತವಾಗಿರುವ ಬೇಗಾರು-ಕೆಲ್ಲಾರು-ನೆಮ್ಮಾರು ಲೋಕೋಪಯೋಗಿ ಇಲಾಖೆ ರಸ್ತೆಯ ದುರಸ್ತಿ ಮತ್ತು ಸುಸ್ಥಿತಿಯಲ್ಲಿಡುವ ಬಗ್ಗೆ ಅತಿ ಹೆಚ್ಚಿನ ಪ್ರಾಶಸ್ತ್ಯ ನೀಡಲು ಶಾಸಕ ಗೋವಿಂದಗೌಡರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಇದೇ ೧೬ ಮತ್ತು ೧೭ ರಂದು ಕಿಗ್ಗ ಹೋಬಳಿಯಲ್ಲಿ ಪಾದಯಾತ್ರೆ ನಡೆಸಿದಾಗ ಈ ರಸ್ತೆಯ ಉಪಯುಕ್ತತೆಯನ್ನೂ ಅದರ ಈಗಿನ ದುರವಸ್ಥೆಯನ್ನೂ ಮನಗಂಡ ಶಾಸಕರು ಈ ಕ್ರಮ ಕೈಗೊಂಡಿದ್ದಾರೆ.

ಹಲವು ಬಗೆ ಸಮಸ್ಯೆಗಳು

ಒಂದೇ ದಿನದಲ್ಲಿ ೨೦ ಮೈಲಿಗೂ ಹೆಚ್ಚು ದೂರ ಕ್ರಮಿಸಿದಾಗ ಕಂಡುಬಂದ ಸಮಸ್ಯೆಗಳು ಒಂದೆರಡು ಬಗೆಯವಲ್ಲ. ಎಲ್ಲವನ್ನೂ ಗುರುತು ಹಾಕಿಕೊಂಡು, ಯಾವ ಯಾವ ಕೆಲಸಕ್ಕೆ ಎಷ್ಟು ಆದ್ಯತೆ ಕೊಡಬೇಕು ಎಂಬುದನ್ನೆಲ್ಲ ವಿವರವಾಗಿ ಪರಿಶೀಲಿಸುವ ಭರವಸೆಯನ್ನು ಶಾಸಕರು ನೀಡಿದ್ದಾರೆ.

ರಸ್ತೆ, ಮೋರಿ, ಸೇತುವೆ, ನೀರು, ಜನತಾ ಮನೆ, ದರ್ಖಾಸ್ತು ಭೂಮಿ, ಸರ್ಕಾರಿ ನೌಕರರ ಆಸಕ್ತಿ, ಕುಲಗೆಟ್ಟ ಕಾಮಗಾರಿಗಳು, ಶಾಲೆ, ಬಸ್‌ಸ್ಟಾಪ್, ಆಸ್ಪತ್ರೆ–ಹೀಗೆ ಮುಟ್ಟಿದ್ದೆಲ್ಲ ಸಮಸ್ಯೆಯೇ. ಎಲ್ಲವಕ್ಕೂ ಸೂಕ್ತವಾದ ಪರಿಹಾರ ದೊರಕಿಸುವ ಬಗ್ಗೆ ಮೇ ೧೭ ರಂದು ಶಾಸಕರು ಶೃಂಗೇರಿಯಲ್ಲಿ ಅಧಿಕಾರಿಗಳ ಜೊತೆ ಚರ್ಚಿಸಿ, ಸೂಚನೆಗಳನ್ನು ನೀಡಿದರು.

ಒಣಗಿದ ಅಡಿಕೆ ತೋಟಗಳು

ಹೋದೆಡೆಯಲ್ಲೆಲ್ಲ, ನೀರಿಲ್ಲದೆ ತುಂಡೆ ಒಣಗಿ ನಿಂತ ಅಡಿಕೆ ತೋಟಗಳು ಎದುರಾದವು. ಮಳೆ ಬಾರದೆ ಬೇಸಿಗೆ ಭತ್ತದ ಬೆಳೆಯನ್ನು ಸಂಪೂರ್ಣ ಕಳೆದುಕೊಂಡ ರೈತರು ಅಡಿಕೆ ತೋಟವೂ ಒಣಗಿರುವುದರಿಂದ ತತ್ತರಿಸಿ ಹೋಗಿದ್ದಾರೆ.

ತೋಟಗಾರಿಕೆ ಮಂತ್ರಿಗಳ ಹತ್ತಿರ ಚರ್ಚಿಸಿ ಪರಿಹಾರ ಕೊಡಿಸಲು ಪ್ರಯತ್ನಿಸುವುದಾಗಿ ನೊಂದ ರೈತರಿಗೆ ಶಾಸಕರು ಸಮಾಧಾನ ಹೇಳಿದ್ದಾರೆ. [ಆರೇಳು ವರ್ಷಗಳ ಹಿಂದೆ ಭಯಂಕರ ಬಿರುಗಾಳಿಯಲ್ಲಿ ಅಡಿಕೆ ತೋಟಗಳು ನಾಶವಾಗಿದ್ದಾಗ ಪರಿಹಾರ ಕೊಡಲಾಗಿತ್ತು. ಅದರಿಂದ ಪರಿಹಾರ ಕೊಡಲು ಸಾಧ್ಯವಿದೆ. ಅಡಿಕೆ ತೋಟದ ಒಣಗಿದ [illegible] ಯಶಸ್ವಿಯಾಗಿ ಎದುರಿಸಬೇಕು ಅಷ್ಟೆ.]

ಕಳೆದ ವರ್ಷದಂತೆ ಈ ವರ್ಷವೂ ಪರೀಕ್ಷೆ ಹಿಂದಿನ ದಿನ ಪ್ರವೇಶ ಪತ್ರ ಕೊಡದಿರಲಿ

ಏಳನೇ ತರಗತಿಯ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಒಂದು ಅರ್ಹತಾ ಪರೀಕ್ಷೆ ನಡೆಯುತ್ತದೆ. ಕಳೆದ ವರ್ಷ ಈ ಪರೀಕ್ಷೆಗಾಗಿ ಕಾದಿದ್ದ ಶೃಂಗೇರಿ, ಕಿಗ್ಗ, ಮುಂತಾದೆಡೆಗಳ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳು ಸಿಕ್ಕಿದ್ದು ಪರೀಕ್ಷೆಯ ಹಿಂದಿನ ಸಂಜೆ. ಹಾಗಾಗಿ ಯಾರಿಗೂ ಪರೀಕ್ಷೆಗೆ ಹೋಗಲಾಗಲಿಲ್ಲ. ಅವರಲ್ಲಿ ಕೆಲವರಾದರೂ ಹುಡುಗರು ವಿದ್ಯಾರ್ಥಿ ವೇತನದ ಆಸ್ರಯದಿಂದ [illegible] ಮಾತ್ರ ಮುಂದೆ ಓದಲು ಸಾಧ್ಯವಾಗುವವರು. ಪರೀಕ್ಷೆ ವ್ಯವಸ್ಥೆ ಮಾಡುವವರು ತಮ್ಮ ಅವಿವೇಕ/ಬೇಜವಾಬ್ದಾರಿತನದಿಂದ ಇಂತಹ ಎಷ್ಟು ಮಕ್ಕಳ ಬಾಳನ್ನೇ ಮಣ್ಣುಗೂಡಿಸಿದರೋ, ಗೊತ್ತಿಲ್ಲ.

ಕಳೆದ ವರ್ಷ ಬೇಳವಿನಕೊಡಿಗೆ ಶಾಲೆಯಲ್ಲಿ ಓದಿದ ತಮ್ಮ ಮಗನಿಗೆ ಇದೇ ಅವಸ್ಥೆಯಾಯಿತೆಂದು ಪತ್ರಿಕೆಗೆ ಪತ್ರ ಬರೆದಿರುವ ಕಾನದ ಲಕ್ಷ್ಮೀನಾರಾಯಣಪ್ಪ ಎಂಬವರು, "ಸರ್ಕಾರದ ಈ ಒಂದು ಒಳ್ಳೆಯ ಉದ್ದೇಶ [illegible] ಕಾರಣರಾದ ಅಧಿಕಾರಿಗಳಿಗೆ ಶಿಕ್ಷೆ ಏನು? ಅವರಿಗೂ ಮಕ್ಕಳಿಲ್ಲವೇ? ಅಥವಾ ನಾಗರಿಕ ಪ್ರಜ್ಞೆ ಇಲ್ಲವೇ?" ಎಂದು ಕೋಪದಿಂದ ಕೇಳಿದ್ದಾರೆ.

ಈಗ ಪುನಃ ಏಳನೇ ತರಗತಿಯ ಪರೀಕ್ಷೆ ಮುಗಿದಿದ್ದು, ಈ ವರ್ಷವಾದರೂ ಅಧಿಕಾರಿಗಳು ಸ್ವಲ್ಪ ಜವಾಬ್ದಾರಿಯಿಂದ ಕೆಲಸ ಮಾಡುತ್ತಾರೋ? ಎಂದೂ ಅವರು ಕೇಳಿದ್ದಾರೆ.

ಅರಣ್ಯನಾಶ ಮತ್ತು ಇಂದಿರಾಗಾಂಧಿ

ಹಿಮಾಲಯದ ತಪ್ಪಲಲ್ಲಿ ಅರಣ್ಯನಾಶವು ಎಡೆಬಿಡದೆ ನಡೆಯುತ್ತಿರುವುದನ್ನು ತಪ್ಪಿಸಲು ಇಡೀ ದೇಶದಲ್ಲಿ ಐದು ವರ್ಷ ಕಾಲ ಅರಣ್ಯ ನಾಶದ ಮೇಲೆ ಪೂರ್ಣ ನಿಷೇಧ ತರಬೇಕು ಎಂದು ಲೋಕಸಭೆಯಲ್ಲಿ ನಾರಾಯಣ್ ಚೌಬೆ ಎಂಬ ಸದಸ್ಯರು ಒತ್ತಾಯಿಸಿದ್ದಕ್ಕೆ ನಮ್ಮ ಪ್ರಧಾನಿ ಶ್ರೀಮತಿ ಇಂಧಿರಾ ಗಾಂಧಿಯವರು ಇತ್ತ ಹೇಳಿಕೆ ಹೀಗಿದೆ:

“ಜೀವನಕ್ಕೆ ಅರಣ್ಯವನ್ನೇ ಅವಲಂಬಿಸಿರುವ ಆದಿವಾಸಿ ಜನರಿಗೆ ತೊಂದರೆಯಾಗುವುದರಿಂದ ಅರಣ್ಯನಾಶದ ಮೇಲೆ ಪೂರ್ಣ ನಿಷೇಧ ವಿಧಿಸುವುದು ಸಾಧ್ಯವಿಲ್ಲ. ಅರಣ್ಯದಲ್ಲಿ ವಾಸಿಸುತ್ತಿರುವ ಜನರಿಗೆ ಪರ್ಯಾಯ ಆಹಾರ ವ್ಯವಸ್ಥೆ ಅಥವಾ ಹೊಸದಾಗಿ “ಸಾಮಾಜಿಕ ಅರಣ್ಯ” ನಿರ್ಮಾಣ ಮಾಡದಿದ್ದರೆ ಅರಣ್ಯ ನಾಶದ ಪೂರ್ಣ ನಿಷೇಧ ಆದಿವಾಸಿಗಳಿಗೆ ಗಂಭೀರ ಸಮಸ್ಯೆಯನ್ನುಂಟು ಮಾಡುತ್ತದೆ. ಆದ್ದರಿಂದ ಆದಿವಾಸಿ ಜನರ ಅಗತ್ಯಗಳನ್ನು ಪೂರೈಸುವುದರ ಜೊತೆಯೇ ರಾಷ್ಟ್ರದ ಅರಣ್ಯವನ್ನೂ ಕಾಪಾಡಬೇಕಾಗುತ್ತದೆ.

(–ಯುಎನ್ಐ ವರದಿ:
ಪ್ರಜಾವಾಣಿ ೫-೫-೮೩)

ಈ ಹೇಳಿಕೆಯನ್ನು ಸ್ವಲ್ಪ ವಿಮರ್ಶೆ ಮಾಡಿದರೆ ಅದರ ಅರ್ಥ ಹೀಗಾಗುತ್ತದೆ: “ದೇಶದಲ್ಲಿ ಅರಣ್ಯನಾಶಕ್ಕೆ ದೊಡ್ಡ ಕಾರಣ ಆದಿವಾಸಿ ಜನರು. ಅರಣ್ಯವನ್ನು ಕಡಿದು ನಾಶ ಮಾಡುವುದೇ ಅವರ ಜೀವನೋಪಾಯ. ಆಹಾರಕ್ಕಾಗಿಯೂ ಅವರು ಅರಣ್ಯ ನಾಶ ಮಾಡುತ್ತಾರೆ. (ಅಂದರೆ ಅವರು ಮರಗಳನ್ನು ತಿನ್ನುತ್ತಾರೆಂದಲ್ಲ, ಜಮೀನಿಗಾಗಿ ಸಿಕ್ಕಾಪಟ್ಟೆ ಕಾಡು ಸವರುತ್ತಾರೆ ಎಂದಿರಬೇಕು ಪ್ರಧಾನಿಯವರ ಅಭಿಪ್ರಾಯ.) ಈಗ ಅರಣ್ಯನಾಶದ ಮೇಲೆ ಪೂರ್ಣ ನಿಷೇಧ ಹೇರಿಲ್ಲದಿರುವುದರಿಂದ ಆದಿವಾಸಿಗಳು ಮನಸ್ವೇಚ್ಛೆಯಾಗಿ ಕಾಡು ಕಡಿದುಕೊಂಡು ಆರಾಮವಾಗಿ ಜೀವಿಸುತ್ತಿದ್ದಾರೆ.”

ಇವನ್ನು ಇನ್ನೊಂದು ಚೂರು ವಿಮರ್ಶೆ ಮಾಡೋಣ. ನಮ್ಮ ದೇಶದ ಜನಸಂಖ್ಯೆಯಲ್ಲಿ ಆದಿವಾಸಿಗಳು ಎಷ್ಟು ಭಾಗ ಇದ್ದಾರೆ? ಗಿರಿಜನರು, ಬುಡಕಟ್ಟು ಜನಾಂಗ ಎಲ್ಲ ಸೇರಿದರೂ ಶೇ. ೫ರಿಂದ ೭ರಷ್ಟಾಗಬಹುದಲ್ಲವೆ? ಅಂದರೆ ಬರೀ ಹಳ್ಳಿಗಾಡಿನ ಜನಸಂಖ್ಯೆಯಲ್ಲೂ ಶೇ. ೬ರಿಂದ ೯ರಷ್ಟಾಗುತ್ತದೆ.

ಇಷ್ಟು ಕಮ್ಮಿ ಜನ ಇಡೀ ದೇಶದ ಲಕ್ಷಾಂತರ ಎಕರೆ ಕಾಡನ್ನು ಗಂಡಾಂತರಕ್ಕೆ ಸಿಕ್ಕಿಸಿದ್ದಾರೆಂದರೆ ನಂಬಲರ್ಹವೆ?

ಅವರು ಜೀವನೋಪಾಯಕ್ಕಾಗಿ ಅರಣ್ಯನಾಶ ಮಾಡುತ್ತಾರೆಂದರೆ ಹೇಗೆ? ಲೋಡುಗಟ್ಟಲೆ ಮರ ಕಡಿದು ಮಾರುತ್ತಾರಾ? ಅಥವಾ ವರ್ಷಂಪ್ರತಿ, ರೀಪು-ಪಕಾಸಿ ಮುಚ್ಚಿಗೆ ಎಲ್ಲ ಹಾಕಿ ಸಾವಿರಗಟ್ಟಲೆ ಮನೆಗಳನ್ನು ಕಟ್ಟುತ್ತಾರಾ? (ಅಂದರೆ ಅವರ ಜನಸಂಖ್ಯೆ ಸಾವಿರಗಟ್ಟಲೆ ಏರುತ್ತಿದೆಯಾ?) ಅಂಟು, ರಾಳ, ಶೀಗೇಕಾಯಿ, ಜೇನು ಮುಂತಾದ ಹಲವು-ಹನ್ನೊಂದು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವುದರಿಂದ ಅರಣ್ಯನಾಶವಾಗುತ್ತಾ? ಅಥವಾ ಸೌದೆ ಕಡಿದು ಕಾಡು ನಾಶಮಾಡುತ್ತಾರಾ? ಅಥವಾ ಬರೀ ಕಾಡಿನಲ್ಲಿ ಜೀವಿಸಿದ ಮಾತ್ರಕ್ಕೇ ಕಾಡು ನಾಶವಾಗಿಬಿಡುತ್ತದಾ ಹೇಗೆ?

ಅವರು ಆಹಾರಕ್ಕಾಗಿ ಹೇಗೆ ಅರಣ್ಯನಾಶ ಮಾಡುತ್ತಾರೆ? ಹಣ್ಣು-ಹಂಪಲು, ಜೇನು ಮುಂತಾದ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿದರೆ ಅರಣ್ಯನಾಶ ಆಗುತ್ತಾ? ಬೇಸಾಯಕ್ಕಾಗಿ ಅರಣ್ಯನಾಶ ಮಾಡುತ್ತಾರೆಂದರೆ ಎಷ್ಟು ಭಾಗ ಆದಿವಾಸಿಗಳು ಬೇಸಾಯ ಮಾಡುವವರಾಗಿದ್ದಾರೆ? ಬೇಸಾಯಕ್ಕಾಗಿ ಒಂದು ವೇಳೆ ಕಡಿದರೂ ಇಂದು ನಮ್ಮ ದೇಶದಲ್ಲಿ ನಾಶವಾಗಿರುವ ಕಾಡಿನ ಎಷ್ಟು ಭಾಗ ಆದೀತು?

ಹೋಗಲಿ, ನಮ್ಮ ಕಣ್ಣ ಮುಂದೆಯೇ ಕಾಡು ನಾಶವಾಗುತ್ತಿರುವ ಕ್ರಮವನ್ನು ಸ್ವಲ್ಪ ನೋಡೋಣ.

೧) ಕೋಟ್ಯಾಂತರ ರೂ. ಖರ್ಚುಮಾಡಿ, ಅದರ ಪ್ರತಿ ರೂ.ಗೆ ಕೇವಲ ೧೮-೨೦ ಪೈಸೆ ಪ್ರತಿಫಲ ಪಡೆಯುವ, ಅದಕ್ಕಾಗಿ ಇಡಿ ಇಡೀ ಜಿಲ್ಲೆಯಲ್ಲೇ ಕಾಡು ಇಲ್ಲದಂತೆ ಮಾಡುವ ಬೇಡ್ತಿಯಂಥ ಜಲ ವಿದ್ಯುತ್ ಯೋಜನೆಗಳು, ಚಕ್ರಾ, ವಾರಾಹಿಗಳು, ಕುದುರೆ ಮುಖಗಳು ಆದಿವಾಸಿಗಳಿಗಾಗಿಯಲ್ಲ ಅಲ್ಲವೆ?

೨) ‘ಪಿಮ್ಕೊ’ ಎಂಬ ಬಹುರಾಷ್ಟ್ರೀಯ ಬಂಡವಾಳ ಕಂಪನಿಯ ಲಾರಿಗಳು ಕಾಡು ಹೊಕ್ಕವೆಂದರೆ “ಬಾಳೆಯ ತೋಟಕ್ಕೆ ಮದ್ದಾನೆ ಹೊಕ್ಕಂತೆ.” ಈ ಕಂಪನಿ ಕಳೆದ ೫-೬ ವರ್ಷಗಳಿಂದ ಪಶ್ಚಿಮ ಘಟ್ಟಗಳ ಕಾಡುಗಳ ಎಷ್ಟು ಭಾಗ ನಿರ್ನಾಮ ಮಾಡಿದೆಯೆಂದು ಯಾರೂ ಲೆಕ್ಕ ಇಟ್ಟಿಲ್ಲ. ದೇಶದ ಒಂದನೇ ನಂಬರ್ ಕೋಟ್ಯಾಧಿಪತಿ ಬಿರ್ಲಾನ ಹರಿಹರ ಪಾಲಿಫೈಬರ್ ಸಂಸ್ಥೆ ಕಾರ್ಖಾನೆಗಳಿಗೆ ಟನ್ನಿಗೆ ೧೦-೧೨ ರೂ.ಗೆ ಒದಗಿಸುವ ಲಕ್ಷಾಂತರ ಟನ್ ಸೌದೆ ಯಾವ ಆದಿವಾಸಿಗಳಿಗಾಗಿ? ಆತನಿಗಾಗಿ, ಸಮೃದ್ಧ ಕಾಡು ಬೆಳೆಯಬಲ್ಲ ಲಕ್ಷಾಂತರ ಎಕರೆಯಲ್ಲಿ ನೀಲಗಿರಿ ಬೆಳೆಸಿದರೆ ಆದಿವಾಸಿಗಳ ಉದ್ಧಾರವಾಯಿತೆ?

೩) ಕಾಫಿ, ಟೀ, ರಬ್ಬರ್ ಮುಂತಾದ ಪ್ಲಾಂಟೇಶನ್-ಎಸ್ಟೇಟುಗಳಿಗಾಗಿ ಕಾಡು ನಾಶವಾಗುವ ವೈಖರಿ ಕಂಡಿದ್ದೀರಲ್ಲ? ಕಾಡಿನ ಕಳ್ಳಸಾಗಣೆದಾರರು ರಾಜಾರೋಷವಾಗಿಯೇ, ಕಾನೂನಿನ ಕಣ್ಣೆದುರಲ್ಲೇ ನಡೆಸುವ ಅರಣ್ಯನಾಶ ಗೊತ್ತಲ್ಲ? ಈ ಎಲ್ಲ ಅರಣ್ಯನಾಶಕರು ಅರಣ್ಯ ಸಂರಕ್ಷಕ ಇಲಾಖೆಯ ಮೆಟ್ಟಿಲುಗಳಿಗೆ (ಕೆಳಗಿನ ಮೆಟ್ಟಿಲಿನಿಂದ ಮೇಲಿನ ಮೆಟ್ಟಿಲವರೆಗೂ ಸಹ) ತಿನ್ನಿಸುವ ಹೇ.... ಎಷ್ಟು ಕೋಟಿ ರೂ. ಆದೀತು? ಹೀಗೆ ಹೇ.... ತಿನ್ನಿಸುವವರು, ಹೇ.... ತಿನ್ನುವವರು ಎಲ್ಲ ಆದಿವಾಸಿಗಳೇನಲ್ಲ ಅಲ್ಲವೆ?

೪) ಕಡೆಯದಾಗಿ, ಹಳ್ಳಿಗಳ ಕಡೆ ಬಡವರೂ ಚೂರುಪಾರು ಜಾಗವನ್ನು ಗದ್ದೆಗಾಗಿ ಸವರುತ್ತಾರೆ; ಸೌದೆ ಕಡಿದು ಮಾರುತ್ತಾರೆ; ತಮ್ಮ ಬಳಕೆಗೆ ಟನ್ನಿಗೆ ೨೦೦-೩೦೦ ರೂ. (ಬಿರ್ಲಾನಿಗೆ ಕೇವಲ ೧೦-೧೨ ರೂ!) ಕೊಟ್ಟು ಸೌದೆ ಕೊಳ್ಳಲಾರದೆ ಸಿಕ್ಕಸಿಕ್ಕಲ್ಲಿ ಸೌದೆ ಕಡಿಯುತ್ತಾರೆ. ಈ ಮುಂತಾದ ರೀತಿಯಲ್ಲೂ ಕಾಡು ನಾಶವಾಗುತ್ತದೆ. ಆದರೆ ಅದು ಮೇಲಿನ ಮೂರು ವಿಧದ ಅರಣ್ಯನಾಶದ ಎಷ್ಟು ಪಾಲು ಆಗುತ್ತದೆ? ಆದರೂ ಇವರುಗಳೂ ಸಹ ಆದಿವಾಸಿಗಳೇನಲ್ಲ.

ಹಾಗಾದರೆ?

....

ಹಾಗಾದರೆ, ಅರಣ್ಯನಾಶವನ್ನು ಪೂರ್ತಿ ನಿಷೇಧಿಸಿದರೆ ಆಗುವ ನಷ್ಟ ಯಾರ್ಯಾರಿಗೆ– ಗೊತ್ತಾಯಿತಲ್ಲ? “ಆ ರೀತಿ ಪೂರ್ಣ ನಿಷೇಧ ಸಾಧ್ಯವಿಲ್ಲ” ಎಂದು ಪ್ರಧಾನಿಯವರು ಯಾರ ಲಾಭಕ್ಕಾಗಿ ಹೇಳುತ್ತಾರೆಂದು ಕಾಣುತ್ತಿಲ್ಲವೆ? ಆದಿವಾಸಿಗಳ ಹೆಸರಲ್ಲಿ ಇವರು ಯಾರ ಉದ್ಧಾರ ಮಾಡುತ್ತಾರೆ?

ಲಂಚ-ಭ್ರಷ್ಟಾಚಾರಗಳಿಂದ ಕತ್ತರಿಸಿ ಹೋದ ಜನಸಾಮಾನ್ಯರು ಹಾಗೂ ಪತ್ರಿಕೆಗಳು ಅದರ ನಿರ್ಮೂಲನೆಯಲ್ಲಿ ಸರ್ಕಾರದ ವೈಫಲ್ಯದ ಬಗ್ಗೆ ಕಟುವಾಗಿ ಹೇಳತೊಡಗಿದಾಗ ಶ್ರೀಮತಿ ಗಾಂಧಿಯವರ ಅಮರವಾಣಿ: “ಭ್ರಷ್ಟಾಚಾರ ನಮ್ಮ ದೇಶದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲೇ ತುಂಬಿದೆ. ಅದರ ನಿರ್ಮೂಲನ ಸುಲಭವಲ್ಲ” (ಸುಲಭವಲ್ಲದ್ದು ನಮಗೆ ಸಾಧ್ಯವೂ ಇಲ್ಲ.)

(ಶಿನೇ ಪುತ್ತಿ)

ಕಾನೂನು ನೆರವು ಸಮಿತಿಗಳು

ರಾಜ್ಯದಲ್ಲಿ ಬೆಂಗಳೂರು ಮತ್ತು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಎಂಟು ಸಾವಿರ ರೂ.ಗಿಂತ ಕಡಿಮೆ ವಾರ್ಷಿಕ ಆದಾಯವಿರುವವರಿಗೆ ಉಚಿತ ಕಾನೂನು ಸಹಾಯ ನೀಡುವ ಉದ್ದೇಶದಿಂದ ‘ಕಾನೂನು ನೆರವು ಸಮಿತಿ’ಗಳನ್ನು ರಚಿಸಲು ಕರ್ನಾಟಕ ಕಾನೂನು ನೆರವು ಮಂಡಳಿ ತೀರ್ಮಾನಿಸಿದೆ. ಈ ಸಮಿತಿಗಳಿಗೆ ಆಯಾಯ ಜಿಲ್ಲಾ ನ್ಯಾಯಾಧೀಶರು ಅಧ್ಯಕ್ಷರಾಗಿಯೂ ಜಿಲ್ಲಾಧಿಕಾರಿಗಳು ಉಪಾಧ್ಯಕ್ಷರಾಗಿಯೂ ಇರುತ್ತಾರೆ. ಈ ಸಮಿತಿಗಳು ವಾರದಲ್ಲಿ ಆರು ದಿನ ಬೆಳಗ್ಗೆ ೮ರಿಂದ ೧೦ ಹಾಗೂ ಸಂಜೆ ೫ರಿಂದ ೭ಗಂಟೆಯವರೆಗೆ ಸಭೆ ಸೇರಿ ಕಕ್ಷಿಗಾರರಿಗೆ ಉಚಿತ ಸಲಹೆ ನೀಡಬೇಕೆಂದು ನಿರ್ದೇಶನವಿದೆ.

ನಿಜವಾಗಿ ಬಹಳ ಉಪಯುಕ್ತವಾದ ಆಲೋಚನೆ.

ಆದರೆ, ಮೇಲ್ಕಂಡ ವೇಳೆಗಳಲ್ಲಿ ದಿನಕ್ಕೆ ನಾಲ್ಕು ಗಂಟೆಯಂತೆ ವಾರದಲ್ಲಿ ಸತತ ೬ದಿನ ಇದೊಂದು ಉದ್ದೇಶಕ್ಕೇ ವಿನಿಯೋಗಿಸಬಲ್ಲ ಯಾವ ಜಿಲ್ಲಾಧಿಕಾರಿ ಇದ್ದಾರೆ? ಹಾಗಾದರೆ ಅವರು ಪ್ರತಿ ದಿನದ ಸಭೆಯಲ್ಲಿ ಭಾಗವಹಿಸುವ ಅಗತ್ಯವಿಲ್ಲವೆ? ಹಾಗಿದ್ದರೆ ಅವರನ್ನು ಮಂಡಳಿಯ ಉಪಾಧ್ಯಕ್ಷರಾಗಿ ನಿಯುಕ್ತಿ ಮಾಡುವ ಅಗತ್ಯವೇನು? ಅವರಿಂದ ಆಗುವುದಾದರೂ ಅಧಿಕಾರ ಸಂಬಂಧವಾದ ಉದ್ದೇಶ ನೆರವೇರುವುದಾದರೆ ಅಷ್ಟಕ್ಕೇ ಅವರ ಭಾಗವಹಿಸುವಿಕೆಯನ್ನು ಮಿತಿಗೊಳಿಸಿದರೆ ಆಗದೆ–ಎಂಬಂಥ ಪ್ರಶ್ನೆಗಳು ವಿಚಾರಾರ್ಹವೆನಿಸುತ್ತವೆ.

ಏಕೆಂದರೆ, ಸರ್ಕಾರದಿಂದ ನಿಯಮಿಸಲ್ಪಟ್ಟ, ಜನಸಾಮಾನ್ಯರಿಗೆ ತಲುಪದೆ, ಅವರ ಉಪಯೋಗಕ್ಕೆ ಬಾರದೆ ದಾಖಲೆಗಳಲ್ಲಿ ಮಾತ್ರ ಕೆಲಸ ಮಾಡಿದಂತೆ ತೋರಿಸಿ, ಬರೀ ಗೌರವಧನ ಖಾಲಿ ಮಾಡುವ ಎಷ್ಟೋ ಸಮಿತಿಗಳು, ಮಂಡಳಿಗಳು ಹುಟ್ಟಿ ಸಾಯುತ್ತಿರುತ್ತವೆ, ಎಷ್ಟೋ ಇನ್ನೂ ಸರ್ಕಾರಿ ದಾಖಲೆಗಳಲ್ಲಿ ಜೀವಂತವಾಗಿಯೇ ಇವೆ. ಅಂಥವುಗಳಿಗೆ ಹೆಚ್ಚಾಗಿ ಹೀಗೇ–ಜಿಲ್ಲಾಧಿಕಾರಿಯೋ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಯೋ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಇತ್ಯಾದಿ ಆಗಿರುತ್ತಾರೆ. ಆದ್ದರಿಂದ ಇಂಥ ಸಮಿತಿಗಳಲ್ಲಿ ಮೇಲ್ಕಂಡಂತೆ ಉನ್ನತ ಅಧಿಕಾರಿಗಳ ಹೆಸರುಗಳು ಕಂಡಾಗ ಇದೂ “ಹತ್ತರ ಜೊತೆಗೆ ಹನ್ನೊಂದು” ಇರಬಹುದೇನೋ ಎಂಬ ಸಿನಿಕತನ ಮೂಡುತ್ತದೆ.

ಆದ್ದರಿಂದ ‘ಕಾನೂನು ನೆರವು ಸಮಿತಿ’ಗಳಂಥ ಘನ ಉದ್ದೇಶದ ಸಮಿತಿಗಳು ಆದಷ್ಟು ಯಥಾರ್ಥವಾಗಿರುವುದು ಅಗತ್ಯ.

“ಬೆಳಕ ತರ ಹೊರಟವರು”

ಎಲ್ಲಿ ಹೋದರವ್ವ.......?
ನಮಗೀಟ ಬೆಳಕ–
ಹುಡುಕ ಹೊರಟ ಜನ
ಈ ಕತ್ತಲೊಳಗೆ ಏನೂ ಕಾಣೋದಿಲ್ಲ....
ತಡವಿ, ಎಡವಿ ಕೂತು–
ಕಿಟಕೀಲಿ ಇಣುಕುತ್ತಿದ್ದೀನಿ.
ಈಗ ತಾನೇ ಬೆಳ್ಳಂಬೆಳಕಿನಲಿ ಬಂದ ಜನ–
ಬೆಳಕ ತರ ಹೊರಟ ಜನ
ಎಲ್ಲೂ ಕಾಣೋದಿಲ್ಲ.
ಅಲ್ಲಿ ಮುಗಿಲೆಲ್ಲ ಮಬ್ಬು ಮಬ್ಬು....
ನಾವಿಬ್ಬರು ಕದ ಮುಚ್ಚಿ,
ಸೂರ್ಯ ಕಾಣದ, ಗುಡಿಸಿಲೊಳಗೆ
ಕಪ್ಪಲ್ಲಿ ಎಡವಿ, ನಡುಗುತ್ತ,
ಆ ಸುಳ್ಳ ಬೆಳಕ ಮರೆತು,
ಹೃದಯ ಹಾಡುಗಳ ಗುಣುಗುಟ್ಟುತ್ತ
ಕೂತಾಗ,
ಬೆನ್ನ ಹಿಂದೆ ಬಂದು ಕದ ತಟ್ಟಿದವರು.
ಒಮ್ಮೆ ಬೆಳಗಿ, ಕಣ್ಣಲ್ಲಿ ಮಿಂಚ ಹೊಳೆಸಿ
ಸತ್ತ ಗಾಂಧಿ ಮುದುಕನ ಎತ್ತಿ
ಕತ್ತಲಾಚೆಯ ಸೂರ್ಯನ ಬಗ್ಗೆ ಹೇಳಿ,
ಬೆಳಕ ತರ ಹೊರಟವರು
ಎಲ್ಲಿ ಹೋದರವ್ವ....
ಮುದುಡು ಮನದಲ್ಲಿ
ಆಸೆ ಹೆಜ್ಜೆಯನು ಇಕ್ಕಿ ರಾಡಿಗೊಳಿಸಿ,
ಮತ್ತೂ ಮಬ್ಬಿನಲಿ ದೂಡಿ,
ದ್ವಂದ್ವಕ್ಕೆ ಈಡು ಮಾಡಿದವರು
ಹೊಟ್ಟೆಯ ಹಸಿವ ಕೂಸು
ಕಿರುಚಿ ಸುಸ್ತಾಗಿ ಮಲಗಿದ್ದಾಗ–
ತಟ್ಟಿ ಎಬ್ಬಿಸಿ,
ರೊಟ್ಟಿ ತರುವೆ ಹೇಳಿ ಹೊರಟವರು.
ಎಲ್ಲಿ ಹೋದರವ್ವ.....?
ಇಲ್ಲಿ ಎಲ್ಲೂ ಕಾಣೋದಿಲ್ಲ....
ಎಲ್ಲ ಮಬ್ಬು ಮಬ್ಬು

–ಕಂ.ಕ. ಕೃಷ್ಣಮೂರ್ತಿ.

ಶಾಲಾ ಕಾಲೇಜು ಅಧ್ಯಾಪಕರನ್ನು ಬೇಗನೆ ನೇಮಿಸಿ

ಹೊಸ ಸರ್ಕಾರ ಬಹಳಷ್ಟು ಭರವಸೆ ಕೊಡುತ್ತ, ತನ್ನ ಸಾಧನೆಗಳ, ಗುರಿಗಳ ಪ್ರಚಾರದಲ್ಲಿ ಹಳೆಯ ಸರ್ಕಾರವನ್ನೂ ಮೀರಿಸುವಂತೆ ಕಾಣುತ್ತಿದೆ. ಈ ಮಧ್ಯೆ ಅದರ ಮುಗಿಯದ ಜಂಜಾಟಗಳ ನಡುವೆ, ಹಿಂದೆಯೇ ಮಡುಗಟ್ಟಿದ್ದ ಹಳೆಯ ಸಮಸ್ಯೆಗಳಲ್ಲಿ ಈಗ ಹುಳು ಬೀಳುವುದೊಂದು ಬಾಕಿಯಾಗಿದೆ.

ಆದರೆ ಇನ್ನೆಲ್ಲ ಜಂಜಾಟಗಳ ಮಧ್ಯೆ ಸರ್ಕಾರ ತುರ್ತಾಗಿ, ಮುತುವರ್ಜಿವಹಿಸಿ ಮಾಡಬೇಕಾದ ಕೆಲಸವೊಂದಿದೆ-**ಶಾಲೆ ಕಾಲೇಜುಗಳ ಅಧ್ಯಾಪಕರ ನೇಮಕ.** ಹಲವು ವರ್ಷಗಳಿಂದ ರಾಜ್ಯ ಸರ್ಕಾರದ ಯಾವ ಪ್ರಮುಖ ಉದ್ಯೋಗಗಳಿಗೂ ನೇಮಕಾತಿ ನಡೆದಿಲ್ಲ. ಅದರ ಪೈಕಿ ಅತಿ ಮುಖ್ಯವಾಗಿ ಅಧ್ಯಾಪಕರ ನೇಮಕ ಆಗಬೇಕಾಗಿದೆ.

ಕಳೆದ ವರ್ಷವೇ ಎಲ್ಲ ಕಡೆ ಅಧ್ಯಾಪಕರ ಕೊರತೆಯಿಂದಾಗಿ ಕಾಲೇಜು ವಿದ್ಯಾರ್ಥಿಗಳು ಬಹಳ ತೊಂದರೆ ಅನುಭವಿಸಿದ್ದಾರೆ. ಎಷ್ಟೋ ಕಡೆ ಚಳುವಳಿಗಳನ್ನೂ ನಡೆಸಿದ್ದಾರೆ. (ನಮ್ಮ ಕೊಪ್ಪದ ಕಾಲೇಜು ವಿದ್ಯಾರ್ಥಿಗಳಂತೂ ಅತ್ಯುತ್ತಮ ರೀತಿಯಲ್ಲಿ ಚಳುವಳಿ ನಡೆಸಿ, ತಕ್ಕಮಟ್ಟಿಗೆ ಯಶಸ್ವಿಯೂ ಆದರು.) ಇನ್ನು ಪ್ರಾಥಮಿಕ ಶಾಲೆಗಳ ಸ್ಥಿತಿಯಂತೂ ಕೇಳುವುದೇ ಬೇಡ. ನಮ್ಮ ಕ್ಷೇತ್ರದ ೩ ತಾ||ಗಳಲ್ಲೇ ಸುಮಾರು ಒಂದು ನೂರು ಹುದ್ದೆಗಳು ಖಾಲಿಯಿರುವ ಅಂದಾಜಿದೆ.

ಈ ಸರ್ಕಾರವಾದರೂ ಕೂಡಲೇ ಕಾರ್ಯಪ್ರವೃತ್ತವಾಗಿ ಅಧ್ಯಾಪಕರ ನೇಮಕಕ್ಕೆ ಕ್ರಮ ತೆಗೆದುಕೊಳ್ಳಬೇಕು. ದೇಶದ ಅತ್ಯಂತ ಮೂಲಭೂತ ಆಶಯಗಳಲ್ಲೊಂದಾದ ಮೂಲಶಿಕ್ಷಣ ಆದ್ಯತೆಯ ಪಟ್ಟಿಯಲ್ಲಿ ತೀರ ಕಡೆಯ ಸ್ಥಾನ ಪಡೆದಿರುವುದು ಕ್ರಮೇಣ ಆದರೂ ತಪ್ಪಬೇಕು.

-ಸಂಪಾದಕ.

ಅರಣ್ಯ ನಾಶ ಮತ್ತು........

(೨ನೇ ಪುಟದಿಂದ)

ಭಾರತದ ನಾಯಕಿ ಹೋಗಿ ಈಗ "ವಿಶ್ವದ ನಾಯಕಿ"ಯಾಗಿರುವ ಇವರು ಸತ್ಯದ ತಲೆ ಮೇಲೆ ಹೊಡೆದಂತೆ ಹಸಿಹಸಿಯಾಗಿ ಏನನ್ನು ಹೇಳುತ್ತಾರೆ? ಯಾರ ಹಿತಕ್ಕಾಗಿ ಇವರು ಕೆಲಸ ಮಾಡುತ್ತಾರೆ? ಅರ್ಥವಾಗುತ್ತಾ?

ಇಂಥವರ ಮತ್ತು ಅವರ ಹಿಂಡಿನ ಕೈಯಲ್ಲಿ ಸಿಕ್ಕಿರುವ ಈ ಸಮೃದ್ಧ ದೇಶ ಖಾಲಿಯಾಗಲು ಎಷ್ಟು ಕಾಲ ಬೇಕಾದೀತು?

ಓದುಗರ ಪತ್ರ

ಕೊಪ್ಪಕ್ಕೆ ಕೋರ್ಟು: ಒಂದು ಸಲಹೆ

ಮಾನ್ಯರೆ,

ಕೊಪ್ಪಕ್ಕೆ ಕೋರ್ಟು ಬೇಕೆಂಬ ಬಗೆಗಿನ ವಾದ-ವಿವಾದಗಳನ್ನು ಗಮನಿಸುತ್ತಿದ್ದೇನೆ. ಈ ಬಗ್ಗೆ ನನ್ನ ಅಭಿಪ್ರಾಯ ಹೀಗಿದೆ.

ಕೊಪ್ಪದಲ್ಲಿ ಹೊಸದಾಗಿ ನ್ಯಾಯಾಲಯ ಸ್ಥಾಪನೆಗೆ ಅಭ್ಯಂತರವಿಲ್ಲ. ಆದರೆ ಯಾವುದೇ ಕಾರಣದಿಂದ ಅದು ಆಗದಿದ್ದಲ್ಲಿ ನಾವು ಕೇಳಬಹುದಾದ ಅತ್ಯುತ್ತಮ ಬೇಡಿಕೆಯೆಂದರೆ **ಕೊಪ್ಪ ತಾ||ನ ಪ್ರಕರಣಗಳು ಹೆಚ್ಚಿದ್ದಾಗ ಕೋರ್ಟಿನ ಅಧಿವೇಶನ (ಸಿಟ್ಟಿಂಗ್) ಕೊಪ್ಪದಲ್ಲಿ** ನಡೆಯುವುದು ಎಂಬುದು. ಇದೇ ರೀತಿ ಶೃಂಗೇರಿಗೂ ಕೂಡ. ಆ ದಿನ ತಮ್ಮ ಅಗತ್ಯ ಸಿಬ್ಬಂದಿಯೊಂದಿಗೆ ನ್ಯಾಯಾಧೀಶರು ಇಲ್ಲಿಗೆ ಬಂದು ಕೋರ್ಟು ನಡೆಸಿ ಹಿಂದಕ್ಕೆ ಹೋಗಬಹುದು, ಅಥವಾ ಇಲ್ಲೇ ಉಳಿಯಲಿಕ್ಕೆ ಸಹ ಬೇಕಾದಷ್ಟು ಸೌಕರ್ಯಗಳಿವೆ.

ಈ ರೀತಿಯ ನಡವಳಿಕೆ ಬಹಳ ಕಡೆ ಇದೆ. ಹಾಸನದ ಸೆಶನ್ಸ್ ಕೋರ್ಟು ಸಕಲೇಶಪುರದಲ್ಲಿ, ಅಂಕೋಲದ ಮುನ್ಸಿಫ್ ಕೋರ್ಟು ಕುಮಟಾದಲ್ಲಿ ಮುಂತಾಗಿ ಅಧಿವೇಶನ ಹೊಂದಿವೆ. ಇದರಿಂದ ಯಾವುದೇ ವಾದವಿವಾದಕ್ಕೆ ಎಡೆಯಿಲ್ಲದಂತೆ ಜನರ ಅಗತ್ಯ ಸಂಪೂರ್ಣವಾಗಿ ನೆರವೇರುತ್ತದೆ.

ಕೊಪ್ಪದಲ್ಲಿ ಈಗಲೇ ಇಬ್ಬರು ವಕೀಲರಿದ್ದು, ಇನ್ನೂ ಒಂದಿಬ್ಬರು ಪ್ರಾಕ್ಟೀಸ್ ಶುರು ಮಾಡುವ ಉತ್ಸಾಹದಲ್ಲಿದ್ದಾರೆ. ಅದರಿಂದ ಕಕ್ಷಿಗಾರರಿಗೆ ಯಾವ ಸಮಸ್ಯೆಯೂ ಬರುವುದಿಲ್ಲ. ನ.ರಾ.ಪುರದಲ್ಲಿ ಕೋರ್ಟು ಇದ್ದರೆ ಜನರಿಗೆ ಅನುಕೂಲ ಎಂಬುದು ಸ್ಪಷ್ಟ. ಅದರಿಂದ ಅನುಕೂಲವೆಂದರೆ ಕಾರಿಗೆ ಕಂಟ್ರಾಕ್ಟ್ ಹಿಡಿಯುವವರಿಗೆ ಮಾತ್ರ.

ಕೆಲವು ವರ್ಷಗಳ ಹಿಂದೆ ನ್ಯಾಯಮೂರ್ತಿ ವೃಕ್ಷಸ್ವಾಮಿಯವರ ಏಕ ಸದಸ್ಯ ಆಯೋಗ ಇದೇ ಪ್ರಶ್ನೆಯ ಬಗ್ಗೆ ಪರಿಶೀಲಿಸಲು ಬಂದಾಗ ಅವರ ಎದುರು ಆಕಸ್ಮಾತ್ ಮಾತಾಡುವ ಅವಕಾಶ ಪಡೆದ ನಾನು ಆಗ ಕೂಡ ಕೊಪ್ಪದಲ್ಲಿ ಕೋರ್ಟು ಸ್ಥಾಪನೆಗೆ ಇರುವ ಅನುಕೂಲತೆಗಳನ್ನು ಪ್ರತಿಪಾದಿಸಿದ್ದೆ.

-ಹರೀಶ್ ಸುಂದರ ಜೋಷಿ, ಕೊಪ್ಪ.

ವೃತ್ತಿಪರ ಶಿಕ್ಷಣ: ಕೆಲವು ಮಾಹಿತಿಗಳು

ನಮ್ಮ ೮-೫-೧೯೮೫ರ ಸಂಚಿಕೆಯ 'ಉದ್ಯೋಗಕ್ಕೆ ಅನುಕೂಲವಾಗುವ ಕಲಿಕೆ' ಎಂಬ ಬರಹದಲ್ಲಿ ಕೆಲವು ಉಪಯುಕ್ತ ಕೋರ್ಸುಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಸಂಗ್ರಹಿಸಿ ಪ್ರಕಟಿಸುವುದಾಗಿ ತಿಳಿಸಿದ್ದೆವು. ನಮ್ಮ ಪ್ರಯತ್ನಕ್ಕೆ ತಕ್ಕಷ್ಟು ಮಾಹಿತಿ ಸಿಕ್ಕಿಲ್ಲವಾದರೂ ಸಿಕ್ಕಿದಷ್ಟನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ತಮ್ಮ ಜೀವನವನ್ನು ತಾವು ರೂಪಿಸಿಕೊಳ್ಳಬೇಕು, ತಮ್ಮ ಕಾಲ ಮೇಲೆ ತಾವು ನಿಲ್ಲಬೇಕು (ಸಾಧ್ಯವಾದರೆ ಅಪ್ಪಅಮ್ಮನಿಗೂ ಒಂಚೂರು ಸಹಾಯ ಮಾಡಬೇಕು) ಎಂಬ ಮನೋಭಾವವುಳ್ಳ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿಕೊಂಡು ಮುಂದೆ ಹೋಗಬೇಕು.

ಇನ್ನೊಂದು ಮನವಿ: ನಮ್ಮ ಈ ಸೀಮೆಯಲ್ಲಿ ಅರ್ಧಕ್ಕೆ ಓದು ನಿಲ್ಲಿಸುವ ಅಥವಾ ಓದು ನಿಲ್ಲಿಸಿ ಕೆಲಸ ಹುಡುಕುವ ಅಥವಾ ಏನು ಓದಬೇಕೆಂದು ತಿಳಿಯದೆ ಕುರುಡಾಗಿ ಕಲಿಯುತ್ತ ಹೋಗುವ ಯುವಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಿಗೆ ಉಪಯೋಗವಾಗಬಲ್ಲಂಥ ಯಾವುದಾದರೂ ವೃತ್ತಿಪರ ಶಿಕ್ಷಣ ಕೋರ್ಸುಗಳು ಮತ್ತು ಅವು ದೊರೆಯುವ ಸ್ಥಳ ಮತ್ತಿತರ ವಿವರಗಳನ್ನು ನಮ್ಮ ಓದುಗರ್‍ಯಾರಾದರೂ ಕಳಿಸಿದರೆ ಕೃತಜ್ಞತೆಯಿಂದ ಪ್ರಕಟಿಸುತ್ತೇವೆ.

ಇಲ್ಲಿ ಕೆಲವು ಕೋರ್ಸುಗಳ ಸಂಕ್ಷಿಪ್ತ ಪರಿಚಯ ಕೊಡಲಾಗಿದೆ.

೧. ಟಿ.ಸಿ.ಹೆಚ್.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರಾಗಲು ಅಗತ್ಯವಾದ ಕೋರ್ಸು. ಇದರಲ್ಲಿ ಈಗಾಗಲೇ ಸಾಕಷ್ಟು ಜನ ನಿರುದ್ಯೋಗಿಗಳಾಗಿದ್ದಾರಾದರೂ, ನಮ್ಮ ಶೃಂಗೇರಿ, ಕೊಪ್ಪ, ನ.ರಾ.ಪುರ-ಈ ಮೂರು ತಾ||ಗಳಲ್ಲೇ ಸುಮಾರು ಒಂದುನೂರರಷ್ಟು ಹುದ್ದೆಗಳು ಖಾಲಿಯಿದ್ದು, ಅವು ಯಾವುದಾದರೂ ಕಾಲಕ್ಕೆ ಭರ್ತಿಯಾಗುವುದಾದರೆ, ಈ ಮೂರು ತಾ||ಗಳಲ್ಲಿ ಅವಕ್ಕೆ ಬೇಕಾದಷ್ಟು ಸಂಖ್ಯೆಯಲ್ಲಿ ಕಲಿತ ಅಭ್ಯರ್ಥಿಗಳಿಲ್ಲ.

ನಮ್ಮ ಸುತ್ತಮುತ್ತ ಈ ಶಿಕ್ಷಣ ಕೊಡುವ ಕಾಲೇಜುಗಳು: ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳು, ಚಿಕ್ಕಮಗಳೂರು ಮತ್ತು ಶಿವಮೊಗ್ಗ; "ಮಕ್ಕಳ ವಿದ್ಯಾಸಂಸ್ಥೆ"ಯವರ ಶಿಕ್ಷಕಿಯವರ ತರಬೇತಿ ಕೇಂದ್ರ, ಶಿವಮೊಗ್ಗ; ಹೆಮ್ಮಕ್ಕಳ ಶಿಕ್ಷಕಿಯರ ತರಬೇತಿ ಸಂಸ್ಥೆ, ಉಡುಪಿ, ಇತ್ಯಾದಿ.

೨. ಐ.ಟಿ.ಐ.

ಇಂಜಿನಿಯರಿಂಗ್‌ಗೆ ಸಂಬಂಧಪಟ್ಟ ಹಲವು ವೃತ್ತಿಗಳಲ್ಲಿ ಒಂದು ಅಥವಾ ಎರಡು ವರ್ಷದ ಅವಧಿಯಲ್ಲಿ ತರಬೇತಿಯನ್ನು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ನೀಡಲಾಗುತ್ತದೆ. ಇದರಲ್ಲಿ ತಾತ್ವಿಕ ಅಂಶ ಬಹಳ ಕಮ್ಮಿ. ನೇರವಾಗಿ ಕೆಲಸದಲ್ಲಿ ತೊಡಗಲು ಬೇಕಾಗುವ ತರಬೇತಿ ಇರುತ್ತದೆ. ತರಬೇತಿ ಮುಗಿದ ನಂತರ ಆ ಬಗ್ಗೆ ಸರ್ಟಿಫಿಕೇಟ್ ನೀಡಲಾಗುತ್ತದೆ. ಇದಕ್ಕೆ ಅಖಿಲ ಭಾರತ ಮಟ್ಟದಲ್ಲಿ ಮಾನ್ಯತೆಯಿರುತ್ತದೆ.

ನುರಿತ (ತರಬೇತಾದ) ಕೆಲಸಗಾರರು ಬೇಕಾಗಿರುವ ಕೈಗಾರಿಕೆಗಳು ಐ.ಟಿ.ಐ. ತರಬೇತಿ ಪಡೆದವರನ್ನು ನೇರವಾಗಿ ಕೆಲಸಕ್ಕೆ ನೇಮಿಸಿಕೊಳ್ಳುತ್ತವಲ್ಲದೆ ಸಂಬಳ-ಸಾಲಿಗಳು ಸಾಕಷ್ಟು ಉತ್ತಮವಾಗಿರುತ್ತವೆ. ಸಣ್ಣ-ದೊಡ್ಡ ಕೈಗಾರಿಕೆಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಈ ತರಬೇತಿಗೆ ಉದ್ಯೋಗಾವಕಾಶಗಳು ವಿಪುಲವಾಗಿವೆ. ಅಲ್ಲದೆ ಸ್ವಂತ ಉದ್ಯಮಗಳನ್ನು (ಸಣ್ಣ ಪ್ರಮಾಣದಲ್ಲಾದರೂ) ಕೈಗೊಳ್ಳಲು ಇದು ಉಪಯುಕ್ತ.

ನಮಗೆ ಸಮೀಪವಾಗಿ ಭದ್ರಾವತಿಯಲ್ಲಿ ಮಾತ್ರ ಐಟಿಐ ಕಲಿಸುವ ಕಾಲೇಜು ಇದೆ. (ವಿವರ ಮುಂದೆ ಕೊಡಲಾಗಿದೆ.)

೩. ಡಿಪ್ಲೊಮಾ

ತಾಂತ್ರಿಕ ಪರಿಜ್ಞಾನದ ಮೂಲ ವಿಭಾಗಗಳಾದ ಸಿವಿಲ್, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ಗಳಲ್ಲಿ ಪದವಿ (ಬಿ.ಇ.) ಪಡೆಯಲು ಅಪಾರವೆಚ್ಚದಲ್ಲಿ ೫ ವರ್ಷ ಕಲಿಯಬೇಕು. ಬಿ.ಇ. ಯಲ್ಲಿ ಈ ತಾಂತ್ರಿಕ ವಿಷಯಗಳಲ್ಲಿ ತಾತ್ವಿಕ ಪರಿಜ್ಞಾನದ (ಥಿಯರಿ) ಅಂಶ ಬಹಳ ವಿಸ್ತಾರ. ಇದೇ ವಿಷಯಗಳಲ್ಲಿ ೩ ವರ್ಷಗಳಷ್ಟು ಕಡಿಮೆ ಅವಧಿಯಲ್ಲಿ ಪ್ರಯೋಗಾತ್ಮಕ ಅಂಶಕ್ಕೆ ಹೆಚ್ಚು ಒತ್ತುಕೊಟ್ಟು ಕಲಿಸುವ ಕೋರ್ಸುಗಳಿಗೆ ಇಂಜಿನಿಯರಿಂಗ್ ಡಿಪ್ಲೊಮಾಗಳೆಂದು ಹೆಸರು. ಇವನ್ನು ಕಲಿಸುವ ಕಾಲೇಜು ಪಾಲಿಟೆಕ್ನಿಕ್.

ಈ ಶಿಕ್ಷಣದ ಪ್ರಯೋಜನಗಳೂ ಐಟಿಐ ನಂತೆಯೇ. ಆದರೆ ಇದು ಅದಕ್ಕಿಂತ ಸ್ವಲ್ಪ ಉನ್ನತಮಟ್ಟದ ಶಿಕ್ಷಣ ಹಾಗೂ ತಾತ್ವಿಕ ಅಂಶಗಳು ಸ್ವಲ್ಪ ಜಾಸ್ತಿ. ಆದ್ದರಿಂದ ವರ್ಕ್‌ಶಾಪ್ ಅಥವಾ ಕಾರ್ಖಾನೆಯ ವಿಭಾಗಗಳೊಂದರಲ್ಲಿ ಸ್ವತಂತ್ರವಾಗಿ ಮೇಲ್ವಿಚಾರಣೆ ನಡೆಸುವ ಸಾಮರ್ಥ್ಯವೂ ಇರುತ್ತದೆ. ಆದ್ದರಿಂದ ಸಂಬಳ ಸಾರಿಗೆಗಳೂ ಉತ್ತಮವಾಗುತ್ತವೆ. ಇದಕ್ಕೂ ಐಟಿಐನಂತೆಯೇ ಉದ್ಯೋಗಾವಕಾಶಗಳು ಅಥವಾ ಸ್ವಂತ ಉದ್ಯಮದ ಸಾಧ್ಯತೆಗಳು ಹೇರಳವಾಗಿವೆ.

[ಆದರೆ ಈ ಎರಡೂ ವೃತ್ತಿಮಾರ್ಗಗಳು ಮೈ ಕೈ ಕೊಳೆ ಮಾಡಿಕೊಳ್ಳಬೇಕಾದ ವೃತ್ತಿಗಳು. ಮೈಕೈ ಕೊಳೆಯಾಗದೆ ಹೊಟ್ಟೆ ತುಂಬಬೇಕು; ಕಾರ್ಖಾನೆಯ ಕೆಲಸಗಾರ ಎಂದರೆ ಡಿಗ್ರೇಡು ಎಂದು ತಿಳಿಯುವ ಮಂದಿಗೆ ಮರ್ಯಾದೆಯಿಂದ ಸಂತೃಪ್ತ ಜೀವನ ಅನುಭವಿಸಬಲ್ಲ ಈ ವೃತ್ತಿಗಳು ಎಟಕುವುದಿಲ್ಲ.]

ಕೆಲವು ಪಾಲಿಟೆಕ್ನಿಕ್‌ಗಳಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ಎಂಬ ೩ ವರ್ಷದ ಒಂದು ಕೋರ್ಸು ಇದ್ದು, ವಾಣಿಜ್ಯ ವಿಷಯಗಳ, ಲೆಕ್ಕಪತ್ರ ಮತ್ತು ಶೀಘ್ರಲಿಪಿಗಳನ್ನು ಕಲಿಸಲಾಗುತ್ತದೆ. ಕಚೇರಿ, ಕಾರ್ಖಾನೆ ಮುಂತಾದೆಡೆ ಸ್ಟೆನೋಗ್ರಾಫರ್, ಕಚೇರಿ ಕಾರ್ಯದರ್ಶಿ ಅಥವಾ ಅಧಿಕಾರಿಗಳ ಆಪ್ತ ಕಾರ್ಯದರ್ಶಿಗಳಾಗಿ [illegible] ಇದು ಉಪಯುಕ್ತವಾಗಿದ್ದು, [illegible] ಲಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ. ಈ ಕಲಿಕೆಗೂ ಉದ್ಯೋಗಾವಕಾಶಗಳು ವಿಪುಲವಾಗಿವೆ.

ನಮಗೆ ಹತ್ತಿರದಲ್ಲಿ ಚಿಕ್ಕಮಗಳೂರು ಮತ್ತು ಭದ್ರಾವತಿಗಳಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳಿವೆ.

೪. ಅಪ್ರೆಂಟೈಸ್ ಶಿಪ್

ಅಪೇಕ್ಷಿಸುವ [illegible] ಕೈಗಾರಿಕೆಗಳಲ್ಲಿ ನೇರವಾಗಿ ನೇಮಿಸಿಕೊಂಡು ಸಂಭಾವನೆ ಕೊಡುತ್ತಾ ತರಬೇತಿ ಕೊಡುವ ಕ್ರಮ ಅಪ್ರೆಂಟೈಸ್‌ಶಿಪ್. ಆ ಬಗ್ಗೆ [illegible] ಸುಮಾರು [illegible] ವೃತ್ತಿಗಳು ಇದರ ವ್ಯಾಪ್ತಿಗೆ ಬರುತ್ತವೆ.

(ಇನ್ನೂ ಇದೆ)

ಚಿಕ್ಕಮಗಳೂರು ಜಿಲ್ಲಾ ಮಟ್ಟದ ಸಂಗೀತ ಸ್ಪರ್ಧೆ

ಕೊಪ್ಪ: ಬಾಳಗಡಿಯ ಸರ್ವೋದಯ ಯುವಕಸಂಘ ಮತ್ತು ಚೇತನ ಯುವತಿ ಮಂಡಳಿ ಇವರ ಸಂಯುಕ್ತ ಆಶ್ರಯದಲ್ಲಿ ಚಿಕ್ಕಮಗಳೂರು ಜಿಲ್ಲಾ ಮಟ್ಟದ ಸಂಗೀತ ಸ್ಪರ್ಧೆಯನ್ನು (ಕನ್ನಡ ಭಾವಗೀತೆ, ಜಾನಪದ ಗೀತೆ, ಭಕ್ತಿಗೀತೆ) ದಿನಾಂಕ: ೨೯-೫-೧೯೮೩ರಂದು ಬಾಳಗಡಿಯ ಹಿರಿಯ ಪ್ರಾಥಮಿಕ ಪಾಠಶಾಲೆಯ ಆವರಣದಲ್ಲಿ ಏರ್ಪಡಿಸಲಾಗಿದೆ. ೧೫ ವರ್ಷಕ್ಕೆ ಮೇಲ್ಪಟ್ಟ ಯುವಕ-ಯುವತಿಯರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ದಿನಾಂಕ: ೨೯-೫-೮೩ರ ಒಳಗೆ ಕೆ.ಎಸ್. ಪ್ರಕಾಶ್, ಕಾರ್ಯದರ್ಶಿ, ಸರ್ವೋದಯ ಯುವಕ ಸಂಘ (ರಿ), ಬಾಳಗಡಿ, ಕೊಪ್ಪ-೫೭೭೧೨೬ ಇವರಿಗೆ ತಲುಪುವಂತೆ ಅವೇದನಾ ಪತ್ರವನ್ನು ಕಳಿಸಬೇಕು. ಪ್ರತಿಯೊಂದು ಸ್ಪರ್ಧೆಗೂ ೨ರೂ. ಪ್ರವೇಶ ಶುಲ್ಕವಿರುತ್ತದೆ.

ವೃತ್ತಿಪರ ಶಿಕ್ಷಣ: ಕೆಲವು ಮಾಹಿತಿಗಳು

(೩ನೇ ಪುಟದಿಂದ)

ಸಾಮಾನ್ಯವಾಗಿ ೭ಜನ ಕೆಲಸಗಾರರಿಗೆ ಒಬ್ಬರಂತೆ ಅಪ್ರೆಂಟೈಸ್‌ಗಳನ್ನು ಪ್ರತಿ ಕೈಗಾರಿಕೆಯಲ್ಲೂ ನೇಮಿಸಿಕೊಳ್ಳಬೇಕು. ಕಲಿಕೆ ಅವಧಿ ಆಯಾ ಕಸಬುಗಳಿಗೆ ಅನುಗುಣವಾಗಿ ಒಂದರಿಂದ ನಾಲ್ಕು ವರ್ಷ ಇರುತ್ತದೆ. ಮೊದಲ ವರ್ಷ ೧೩೦ ರೂ; ೨ನೇ ವರ್ಷ ೧೪೦ರೂ; ೩ನೇ ವರ್ಷ ೧೫೦ರೂ. ಮತ್ತು ೪ನೇ ವರ್ಷ ೨೦೦ರೂ. ಸಂಭಾವನೆ ಕೊಡಲಾಗುತ್ತದೆ. ಐಟಿಐ ಕಲಿತವರಿಗೆ ಅಷ್ಟು ವರ್ಷ ವಿನಾಯ್ತಿಯಿದೆ. ತರಬೇತಿಯ ನಂತರ ಕೇಂದ್ರ ಸರ್ಕಾರ ಪರೀಕ್ಷೆ ನಡೆಸಿ ಸರ್ಟಿಫಿಕೇಟ್ ನೀಡುತ್ತದೆ. ಇದಕ್ಕೆ ಭಾರತಾದ್ಯಂತ ಮಾನ್ಯತೆಯಿದೆ.

ಈ ರೀತಿ ತರಬೇತಿ ಪಡೆದವರನ್ನು ಅಲ್ಲೇ ನಿಯಮಿಸಿಕೊಳ್ಳಬೇಕೆಂಬ ನಿಬಂಧನೆಯಿಲ್ಲವಾದರೂ ಸಾಮಾನ್ಯವಾಗಿ ಕೆಲಸ ಸಮರ್ಪಕವಿದ್ದು, ಕೆಲಸ ಖಾಲಿ ಇದ್ದರೆ ಅಲ್ಲೇ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ.

ಕೊಪ್ಪದ ಶಂಕರ್ ಕಂಪನಿಯಲ್ಲೂ ಈ ವ್ಯವಸ್ಥೆಯಿದ್ದು, ಶಿವಮೊಗ್ಗ, ಭದ್ರಾವತಿ ಮುಂತಾದೆಡೆಗಳ ಕೈಗಾರಿಕೆಗಳ ಬಗ್ಗೆ ನಮಗೆ ಮಾಹಿತಿ ಸಿಕ್ಕಿಲ್ಲ. ಆಸಕ್ತಿಯುಳ್ಳವರು ಆಯಾ ಕೈಗಾರಿಕೆಗಳಿಂದಾಗಲಿ ಜಿಲ್ಲಾ ಕೇಂದ್ರಗಳಲ್ಲಿರುವ ಐಟಿಐ ಪ್ರಿನ್ಸಿಪಾಲರುಗಳಿಂದಾಗಲಿ ಮಾಹಿತಿ ಪಡೆಯಬಹುದು.

೫ ಫಾರ್ಮಸಿ

ಔಷಧಿಗಳ ರಂಗದಲ್ಲಿ ಪರಿಣತಿ ಗಳಿಸುವ ಶಿಕ್ಷಣ ಫಾರ್ಮಸಿ. ಇದರಲ್ಲಿ ೨ವರ್ಷದ ಡಿ. ಪ್ಲೊಮಾ (ಡಿ.ಫಾರ್ಮ) ಮಾಡಿಕೊಂಡವರು ಆಸ್ಪತ್ರೆಗಳಲ್ಲಿ ಫಾರ್ಮಸಿಸ್ಟ (ಕಾಂಪೌಂಡರ್) ಆಗಿ ಸೇರಬಹುದು. ಔಷಧಿ ಅಂಗಡಿ ತೆರೆಯಬೇಕಾದರೆ ಡಿ. ಫಾರ್ಮ ಕಡ್ಡಾಯ. ಇದಕ್ಕೆ ಎಸ್ಸೆಸ್ಸೆಲ್ಸಿ ಕನಿಷ್ಠ ವಿದ್ಯಾರ್ಹತೆ. ವಿಜ್ಞಾನ ವಿಷಯಗಳಲ್ಲಿ ಪಿಯುಸಿ ಆಗಿದ್ದರೆ ಒಂದು ವರ್ಷ ವಿನಾಯ್ತಿ.

ಫಾರ್ಮಸಿಯಲ್ಲಿ ಪದವಿ (ಬಿ.ಫಾರ್ಮ) ಮಾಡಿಕೊಂಡರೆ ಔಷಧಿ ತಯಾರಿಕೆ ಸಂಸ್ಥೆಗಳಲ್ಲಿ, ಸರ್ಕಾರದ ಡ್ರಗ್ ಇನ್‌ಸ್ಪೆಕ್ಟರ್, ಮೆಡಿಕಲ್ ರೆಪ್ರೆಸೆಂಟೆಟಿವ್ ಮುಂತಾಗಿ ಹಲವು ಬಗೆಯಲ್ಲಿ ಅಪಾರ ಉದ್ಯೋಗಾವಕಾಶಗಳಿವೆ. ಆದ್ದರಿಂದ ವಿಪರೀತ ಪೈಪೋಟಿ ಹಾಗೂ ಡೊನೇಶನ್ ಚಾಲ್ತಿಯಲ್ಲಿವೆ. ಕನಿಷ್ಠ ವಿದ್ಯಾರ್ಹತೆ ಪಿಯುಸಿ.

ಶಿವಮೊಗ್ಗದ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಸಿಯಲ್ಲಿ, ಹಾಗೂ ಚನ್ನರಾಯಪಟ್ಟಣ, ದಾವಣಗೆರೆ ಮುಂತಾದೆಡೆ ಡಿ. ಫಾರ್ಮ ಕೋರ್ಸುಗಳಿವೆ. ಮಣಿಪಾಲ, ಬೆಂಗಳೂರು, ಮೈಸೂರು ಮುಂತಾದೆಡೆ ಇದಲ್ಲದೆ ಬಿ.ಫಾರ್ಮ ಕೂಡ ಕಲಿಯಬಹುದು. (ಮುಂದೆ ಎಂ. ಫಾರ್ಮ ಕೂಡ ಇದೆ.)

ಕೆಲವು ವೃತ್ತಿಪರ ಶಿಕ್ಷಣ ಸಂಸ್ಥೆಗಳು

ಡಿಎಸ್‌ಸಿಜಿ ಪಾಲಿಟೆಕ್ನಿಕ್, ಚಿಕ್ಕಮಗಳೂರು.

ಚಿಕ್ಕಮಗಳೂರಿನ ಡಿಎಸ್‌ಸಿಜಿ ಪಾಲಿಟೆಕ್ನಿಕ್‌ನಲ್ಲಿ ಮೂರೂ ಇಂಜಿನಿಯರಿಂಗ್ ವಿಭಾಗಗಳ ಸಾಮಾನ್ಯ ವಿಷಯಗಳಲ್ಲಿ ಶಿಕ್ಷಣವಿದೆ. (ಆಟೋಮೊಬೈಲ್, ಟೆಲಿಕಮ್ಯುನಿಕೇಶನ್ ಮುಂತಾದ ವಿಷಯಗಳಲ್ಲಿ ಇಲ್ಲ.) ವಿದ್ಯಾರ್ಥಿ ನಿಲಯ ಮುಂತಾಗಿ ಎಲ್ಲ ಸೌಕರ್ಯಗಳಿವೆ. ಕಲಿಯುವಿಕೆಗೆ ಶುಲ್ಕವಿನಾಯ್ತಿ, ವಿದ್ಯಾರ್ಥಿವೇತನಗಳೂ ಮಾಮೂಲಾಗಿ ಇರುವುದಲ್ಲದೆ, ತಾಂತ್ರಿಕ ಶಿಕ್ಷಣಕ್ಕಾಗಿ ಬ್ಯಾಂಕ್‌ಗಳಿಂದ ದೊರೆಯುವ ಸಾಲ ಸೌಲಭ್ಯವೂ ಈ ಶಿಕ್ಷಣಕ್ಕೆ ಇದೆ. ಕನಿಷ್ಠ ವಿದ್ಯಾರ್ಹತೆ ಎಸ್ಸೆಸ್ಸೆಲ್ಸಿ. ಹೆಚ್ಚು ಅಂಕ ಪಡೆದವರಿಗೆ ಆದ್ಯತೆಯಿರುತ್ತದೆ. ಸಾಮಾನ್ಯವಾಗಿ ಮೇ-ಜೂನ್ ನಡುವೆ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ. ಹೆಣ್ಣು ಮಕ್ಕಳಿಗೆ ವಿಶೇಷ ವಿಷಯಗಳಾಗಲಿ ವಿಶೇಷ ಸೌಕರ್ಯಗಳಾಗಲಿ ಇಲ್ಲ. ಕಮರ್ಶಿಯಲ್ ಪ್ರಾಕ್ಟೀಸ್ ಕೂಡ ಇಲ್ಲ.

ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ, ಚಿಕ್ಕಮಗಳೂರು.

ಟಿ.ಸಿ.ಹೆಚ್. ಕೋರ್ಸಿಗೆ ಇರುವ ಕನ್ನಡ, ಇಂಗ್ಲಿಷ್, ಸಮಾಜ, ಗಣಿತ, ವಿಜ್ಞಾನ ಹಾಗೂ ಬೋಧನಾಕ್ರಮ-ಈ ವಿಷಯಗಳನ್ನು ಕನ್ನಡ ಮತ್ತು ಉರ್ದು ಮಾಧ್ಯಮಗಳಲ್ಲಿ ಕಲಿಯಬಹುದು. ಕನಿಷ್ಠ ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ. ಶೇ. ೫೦ಕ್ಕಿಂತ ಹೆಚ್ಚು ಅಂಕ ಪಡೆದವರಿಗೆ ಆದ್ಯತೆ. ಶುಲ್ಕ ವಿನಾಯ್ತಿ, ವಿದ್ಯಾರ್ಥಿವೇತನ ಮುಂತಾದವು ಸರ್ಕಾರಿ ಆದೇಶದ ಪ್ರಕಾರ ಲಭ್ಯ. ಊಟ, ವಸತಿ ಮುಂತಾದ ಸೌಲಭ್ಯಗಳು ಸಂಸ್ಥೆಯ ವತಿಯಿಂದ ಇಲ್ಲ. ಆದರೆ ಬೇರೆ ಹಾಸ್ಟೆಲ್‌ಗಳು, ಮತ್ತು ಹಿಂದುಳಿದ ವರ್ಗಗಳ (ಆರ್ಥಿಕವಾಗಿ ಸಹ) ಹಾಸ್ಟೆಲ್ ಮುಂತಾದೆಡೆ ಊಟ, ವಸತಿಗಳಿಗೆ ಪ್ರಯತ್ನಿಸಬಹುದು. ಹೆಣ್ಣು ಮಕ್ಕಳಿಗಾಗಿ ಹೊಲಿಗೆಯ ವಿಭಾಗ ಹೊಸದಾಗಿ ತೆರೆಯಲಾಗಿದೆ. ಜೊತೆಗೆ ಚಿತ್ರಕಲಾ ವಿಭಾಗ ಕೂಡ ಹೆಣ್ಮಕ್ಕಳಿಗೆ ವಿಶೇಷವಾಗಿ ಅನುಕೂಲಕರವಾಗಬಹುದು. ಅವರಿಗಾಗಿ ಬೇರಾವ ಸೌಲಭ್ಯಗಳೂ ಇಲ್ಲ. ಶುಲ್ಕ, ಪ್ರವೇಶಧನ ಮುಂತಾದ ವಿವರವಾದ ಮಾಹಿತಿಗಳನ್ನು ಅಧೀಕ್ಷಕರು, ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ, ಚಿಕ್ಕಮಗಳೂರು-ಇಲ್ಲಿಂದ ಪಡೆಯಬಹುದು.

ಕೈಗಾರಿಕಾ ತರಬೇತಿ ಸಂಸ್ಥೆ ಭದ್ರಾವತಿ

ಈ ವೃತ್ತಿ ಶಿಕ್ಷಣ ಸಂಸ್ಥೆಯಲ್ಲಿ ೧) ಯಾಂತ್ರಿಕ ನಕ್ಷೆಗಾರ, ೨) ವಿದ್ಯುತ್‌ಶಿಲ್ಪಿ, ೩) ಜೋಡಣೆಗಾರ, ೪) ಚರಕೀಯ ೫) ಯಾಂತ್ರಿಕ, ೬) ನಮೂನೆ ಮಾಡುವವ ಎಂಬ ೨ವರ್ಷದ ಕೋರ್ಸುಗಳೂ, ೭) ಬೆಸುಗೆ, ೮) ಬಡಗಿ, ೯) ಡೀಸೆಲ್ ದುರಸ್ತಿಗಾರ, ೧೦) ಅಚ್ಚುಗಾರ-ಎಂಬ ೧ ವರ್ಷದ ಕೋರ್ಸುಗಳೂ ಇವೆ. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಒಂದನ್ನು ಆರಿಸಿಕೊಳ್ಳಬಹುದು.

ಈ ಪೈಕಿ ಯಾಂತ್ರಿಕ ನಕ್ಷೆಗಾರ ಮತ್ತು ವಿದ್ಯುತ್‌ಶಿಲ್ಪಿ ಕೋರ್ಸುಗಳಿಗೆ ಕನಿಷ್ಠ ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಆಗಿದ್ದು, ಉಳಿದೆಲ್ಲ ಕೋರ್ಸುಗಳಿಗೂ ೮ನೇ ತರಗತಿವರೆಗೆ ಓದಿರಬೇಕು.

ಸರ್ಕಾರಿ ಆದೇಶಕ್ಕನುಗುಣವಾಗಿ ಶುಲ್ಕ ವಿನಾಯ್ತಿ ಇರುತ್ತದೆ ಮತ್ತು ಆದಾಯದ ಅರ್ಹತೆಯ ಮೇಲೆ ತಿಂಗಳಿಗೆ ೫೦ ರೂ. ಶಿಷ್ಯವೇತನ (ಸ್ಟೈಪೆಂಡ್) ಕೊಡಲಾಗುತ್ತದೆ. ಊಟ, ವಸತಿ ಮುಂತಾದವುಗಳಿಗೆ ಸಂಸ್ಥೆಯ ವತಿಯಿಂದ ಸೌಲಭ್ಯಗಳಿಲ್ಲವಾದರೂ ಖಾಸಗಿಯಾಗಿ ಸಾಕಷ್ಟು ಸೌಕರ್ಯಗಳಿವೆ.

ಹೆಣ್ಣು ಮಕ್ಕಳಿಗೆ ವಿಶೇಷವಾಗಿ ಅನುಕೂಲತೆಗಳು ಇಲ್ಲ. ಶಿಕ್ಷಣದ ಮಟ್ಟಿಗೆ ಹೇಳುವುದಾದರೆ, ಯಾಂತ್ರಿಕ ನಕ್ಷೆಗಾರ ಅವರಿಗೆ ಹೆಚ್ಚು ಅನುಕೂಲಕರವಾಗಿದೆ.

ಪ್ರವೇಶದಲ್ಲಿ, ಹೆಚ್ಚು ಅಂಕ ಪಡೆದವರಿಗೆ ಆದ್ಯತೆ ಕೊಡಲಾಗುತ್ತದೆ. ಸೇರುವಾಗ ಶುಲ್ಕ ಹರಿಜನ-ಗಿರಿಜನರಿಗೆ ೨೫ರೂ ಹಾಗೂ ಇತರರಿಗೆ ೭೫ ರೂ. ತರಬೇತಿ ಕಾಲದಲ್ಲಿ ಮತ್ತೆ ಯಾವ ಶುಲ್ಕವೂ ಇಲ್ಲ. ೮೩-೮೪ನೇ ಸಾಲಿಗೆ ಸಂಸ್ಥೆಗೆ ಸೇರುವವರಿಗೆ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಿಂದ ಸದ್ಯವೇ ದಿನಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟವಾಗಲಿದೆ. ಹೆಚ್ಚಿನ ವಿವರಗಳನ್ನು ಪ್ರಾಚಾರ್ಯರು, ಕೈಗಾರಿಕಾ ತರಬೇತಿ ಸಂಸ್ಥೆ, ಭದ್ರಾವತಿ-ಈ ವಿಳಾಸದಿಂದ ಪಡೆಯಬಹುದು.

... .

ಇವಲ್ಲದೆ, ಹಲವಾರು ಆಧುನಿಕ ಉತ್ಪಾದನಾ ವಿಭಾಗಗಳಲ್ಲಿ ಡಿಪ್ಲೊಮಾಗಳು, ನರ್ಸಿಂಗ್, ಪ್ರಯೋಗಾಲಯ ತಂತ್ರಜ್ಞ, ಮುಂತಾದ ಹಲವಾರು ರೀತಿಯ ವೃತ್ತಿಪರ ಶಿಕ್ಷಣಗಳಿವೆ. ಅಲ್ಲದೆ ೧೯೮೨ರ ಜೂನ್ ೨೭ರ 'ಸುಧಾ' ವಾರ ಪತ್ರಿಕೆಯಲ್ಲಿ ಬಹಳಷ್ಟು ಮಾಹಿತಿಗಳಿವೆ. ಆಸಕ್ತರು ಅದನ್ನು ಸಂಗ್ರಹಿಸಿ ಅಧ್ಯಯನ ಮಾಡಬಹುದು. (ನಮ್ಮ ಕಾರ್ಯಾಲಯದಲ್ಲೂ ಒಂದು ಪ್ರತಿ ಇದೆ.)

[ಮೇಲೆ ಕೊಟ್ಟಿರುವ ಮಾಹಿತಿಗಳು ಸಾಕಷ್ಟು ಕರಾರುವಾಕ್ಕಾಗಿವೆಯೆಂದು ನಮ್ಮ ನಂಬಿಕೆ. ಅಕಸ್ಮಾತ್ ಲೋಪ-ದೋಷಗಳಿದ್ದಲ್ಲಿ ಓದುಗರು ದಯವಿಟ್ಟು ತಿಳಿಸಿ.

ಮಾಹಿತಿ ಒದಗಿಸಿದ ಎಲ್ಲರಿಗೂ ಈ ಮೂಲಕ ಧನ್ಯವಾದಗಳನ್ನರ್ಪಿಸುತ್ತೇನೆ.

-ಸಂಪಾದಕ.]

ಸಂಪಾದಕ, ಮುದ್ರಕ, ಪ್ರಕಾಶಕ: ಸಿರಿಮನೆ ನಾಗರಾಜ್, ದೀವಟಿಗೆ ಅಚ್ಚುಕೂಟ, ಕೊಪ್ಪ